ಇಂಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ
279 (399)
ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಚಡಿ)

ಅ) ಇಂಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಜೂನ್ 2009 ರಿಂದ ಡಿಸೆಂಬರ್ 2012ರ ಅವಧಿಯಲ್ಲಿ ಕ್ಷೇತ್ರ ಸಮನ್ವಯ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; (ಹೆಸರು ಸಹಿತ ವಿವರ ನೀಡುವುದು)

ಆ) ಪ್ರಥಮ ಹಂತದಲ್ಲಿ 3 ವರ್ಷ ಕಾರ್ಯ ನಿರ್ವಹಿಸಿ ವರ್ಗಾವಣೆಗೊಂಡು ಮೂರು ತಿಂಗಳ ನಂತರ ಅದೇ ಅಧಿಕಾರಿ ಅದೇ ಹುದ್ದೆಯನ್ನು ಅಲಂಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಅಧಿಕಾರಿ ಮೇಲೆ ಲೈಗಿಂಕ ಕಿರುಕುಳ ಸೇರಿದಂತೆ ಸಾರ್ವಜನಿಕರ ಆಪಾದನೆಗಳಿದ್ದು ಇವರನ್ನು ಕೂಡಲೇ ವರ್ಗಾಯಿಸಲು ಅಥವಾ ಬೇರೆ ಸ್ಥಳಗಳಿಗೆ ನಿಯೋಜಿಸಲು ಸ್ಥಳೀಯ ಶಾಸಕರು ವಿನಂತಿಸಿಕೊಂಡಿದ್ದರೂ ಸರ್ಕಾರವು ಕ್ರಮ ಕೈಗೊಳ್ಳದೇ ಇರಲು ಕಾರಣವೇನು;

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 01 ಶ್ರೀ.ಎಚ್.ಎ.ಇಂಡಿಕರ್ ಆ) 03 ವರ್ಷ ಪೂರ್ಣಗೊಂಡ ನಂತರ ಇವರನ್ನು ಸರ್ಕಾರಿ ಪ್ರೌಢ ಶಾಲೆ, ತೆನ್ನಳ್ಳಿ, ಇಂಡಿ ತಾಲ್ಲೂಕು, ಇಲ್ಲಿಗೆ ವರ್ಗಾಯಿಸಲಾಗಿದ್ದು, ದಿನಾಂಕ:01-06-2012ರಿಂದ 16-07-2012ರ ವರೆಗೆ ಮುಖ್ಯೋಪಾಧ್ಯಾಯರಾಗಿ ಪುನಃ ದಿನಾಂಕ:02-06-2012 ರಿಂದ ದಿನಾಂಕ:16-07-2012ರ ವರೆಗೆ ಕ್ಷೇತ್ರ ಸಮನ್ವಯಾಧಿಕಾರಿಗಳ ಹುದ್ದೆಗೆ ಪರ್ಯಾಯ ವ್ಯವಸ್ಥೆಯಾಗುವವರೆಗೆ ಕ್ಷೇತ್ರ ಸಮನ್ವಯಾಧಿಕಾರಿಗಳು, ಇಂಡಿ ಮುಂದುವರೆಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಇಂಡಿಯವರ ಕೋರಿಕೆಯಂತೆ ಈ ಹುದ್ದೆಯಲ್ಲಿ ತಾತ್ಕಾಲಿಕವಾಗಿ ಹೆಚ್ಚುವರಿ ಕಾರ್ಯಭಾರವನ್ನು ನಿರ್ವಹಿಸಲು ಸೂಚಿಸಲಾಗಿತ್ತು. ಈ ಮಧ್ಯದ ಅವಧಿಯಲ್ಲಿ ವಿಭಾಗೀಯ ಮಟ್ಟದ ಕ್ಷೇತ್ರ ಸಮನ್ವಯಾಧಿಕಾರಿಗಳ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ ದಿನಾಂಕ:25-04-2012ರಂದು ಅರ್ಜಿ ಆಹ್ವಾನಿಸಲಾಗಿತ್ತು. ಅದರಂತೆ ದಿನಾಂಕ:27-05-2012ರಂದು ನಡೆದು ಸದರಿ ಪರೀಕ್ಷೆಯಲ್ಲಿ ಕ್ಷೇತ್ರ ಸಮನ್ವಯಾಧಿಕಾರಿಗಳು

ಇಂಡಿರವರು ತೇರ್ಗಡೆ ಹೊಂದಿ ಪುನಃ ವಿಭಾಗ ಮಟ್ಟದಲ್ಲಿ ಖಾಲಿ ಇರುವ ಬಿ.ಆರ್.ಸಿ ಹುದ್ದೆಗಳಿಗೆ ನಡೆದ ಸಮನ್ವಯಾಧಿಕಾರಿಗಳ ಪರೀಕ್ಷೆಯಲ್ಲಿ ಪಾಸಾಗಿ ಕ್ಷೇತ್ರ ಸಮನ್ವಯಾಧಿಕಾರಿಗಳ ಕಛೇರಿ, ಇಂಡಿಗೆ ದಿನಾಂಕ:13-07-2012ರಂದು ನಡೆದ ಕೌನ್ಸಿಲಿಂಗ್ ಮೂಲಕ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡರವರಿಂದ ಸ್ಥಳ ನಿಯುಕ್ತಿಗೊಂಡು ದಿನಾಂಕ:17-07-2012ರಂದು ಹಾಜರಾಗಿರುತ್ತಾರೆ.

ಇ) ಸದರಿಯವರ ಮೇಲೆ ಈ ಕಛೇರಿಗೆ ಡಯಟ್, ಬಿಜಾಪುರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಇಂಡಿ ಇಲ್ಲಿ ಯಾವುದೇ ದೂರುಗಳು ಬಂದಿರುವುದಿಲ್ಲ.

ಶ್ರೀರಂಗಪಟ್ಟಣದಲ್ಲಿ ಟಿಪ್ಪುಸುಲ್ತಾನ್ ಹೆಸರಿನಲ್ಲಿ ವಿಶ್ವವಿದ್ಯಾಲಯ ಸ್ಥಾಪನೆ

317 (301)

ಶ್ರೀ ರಾಮಲಿಂಗಾರೆಡ್ಡಿ (ಬಿಟಿಎಂ ಲೇಔಟ್)

ಅ) ಶ್ರೀರಂಗಪಟ್ಟಣದಲ್ಲಿ ಟಿಪ್ಪುಸುಲ್ತಾನ್ ಹೆಸರಿನಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಪ್ರಸ್ತಾವನೆ ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ಬಂದಿದೆಯೇ;

ಆ) ಈ ಉದ್ದೇಶಿತ ವಿಶ್ವವಿದ್ಯಾಲಯದ ಸ್ಥಾಪನೆಗೆ ಬೇಕಾಗುವ ಜಮೀನನ್ನು ನೀಡಲು ರಾಜ್ಯ ಸರ್ಕಾರವು ಉದ್ದೇಶಿಸಿದೆಯೇ?

ಶ್ರೀ ಸಿ.ಟಿ.ರವಿ
(ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ

274 (379)

ಶ್ರೀ ಅಮರೇಶ್ (ಮುಳುಬಾಗಿಲು)

ಅ) ಶಾಲಾ ಮಕ್ಕಳಿಗೆ ಯಾವ ತರಗತಿಯಿಂದ ಉಚಿತವಾಗಿ ಸಮವಸ್ತ್ರಗಳನ್ನು ವಿತರಿಸಲಾಗುತ್ತಿದೆ;